# ದಿನಾಂಕ: 30-08-2010ರಂದು ಮಧ್ಯಾಹ್ನ: 03-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

## ಅಧ್ಯಕ್ಷತೆ: ಶ್ರೀ ಎಸ್.ದ್ಯಾವೇಗೌಡ

## ಅಧ್ಯಕ್ಷರು,

## ಸಾಮಾನ್ಯ ಸ್ಥಾಯಿ ಸಮಿತಿ

ಹಾಜರಿ: 07

ಗೈರು ಹಾಜರಿ: 00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪಕಾರ್ಯದರ್ಶಿ(ಆಡಳಿತ) ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಅರಕಲಗೂಡು ಟೌನ್ ಈ ವಿದ್ಯಾರ್ಥಿನಿಲಯದ ಖಾಸಗಿ ಕಟ್ಟಡಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8) 81/2010-11 ದಿನಾಂಕ: 26-08-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿನಲ್ಲಿ ರಾಜ್ಯವಲಯ ಕಾರ್ಯಕ್ರಮದಡಿ, ಅರಕಲಗೂಡು ಟೌನ್ ನಲ್ಲಿ ಹೊಸದಾಗಿ ಮಂಜೂರಾಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಶ್ರೀಮತಿ ಲಕ್ಕಮ್ಮ ಕೋಂ ಶಿವಪ್ಪ, ಕೋಟೆ ಹಿಂದಲ ಬೀದಿ, ಅರಕಲಗೂಡು ಟೌನ್ ಇವರ ಮಾಲೀಕತ್ವದ ಕಟ್ಟಡವನ್ನು ದಿನಾಂಕ; 01-12-2009ರಿಂದ ಸರ್ಕಾರ ನಿಗದಿಪಡಿಸುವ ಬಾಡಿಗೆಯನ್ನು ಪಡೆಯುವ ಷರತ್ತಿಗೊಳಪಟ್ಟು, ಬಾಡಿಗೆಗೆ ಪಡೆದು ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ರೂ.29000/-ಗಳಂತೆ ಬಾಡಿಗೆ ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಕಟ್ಟಡದ ಮಾಲೀಕರಿಗೆ ದಿನಾಂಕ: 01-12-2009ರಿಂದ ಅನ್ವಯವಾಗುವಂತೆ ಮಾಹೆಯಾನ ರೂ.29000/-ಗಳಂತೆ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಕೋರಿರುವಂತೆ, ಅರಕಲಗೂಡು ಟೌನ್ ನಲ್ಲಿ ಶ್ರೀಮತಿ ಲಕ್ಕಮ್ಮ ಕೋಂ ಶಿವಪ್ಪ, ಕೋಟೆ, ಹಿಂದಲ ಬೀದಿ, ಅರಕಲಗೂಡು ಟೌನ್ ಇವರ ಮಾಲೀಕತ್ವದ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಮಾಹೆ |

| | | | |
|---|---|---|---|
| | | ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | ಯಾನ ರೂ.29000/-(ರೂಪಾಯಿ ಇಪ್ಪತ್ತೊಂಬತ್ತು ಸಾವಿರ ಮಾತ್ರ) ಗಳನ್ನು ಮಾಹೆಯಾನ ದಿನಾಂಕ: 01-12-2009ರಿಂದ ಅನ್ವಯವಾಗುವಂತೆ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2 | 2010-11ನೇ ಸಾಲಿನ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ವಿಶೇಷ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಅಂದಾಜು ವೆಚ್ಚ ರೂ.1.50 ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ವಯಸ್ಕರ ಶಿಕ್ಷಣ ಇಲಾಖೆ ಇರುವ ಸ್ಥಳದಲ್ಲಿ ನಿರ್ಮಿಸುವ ಬದಲಿಗೆ ಹಾಸನ ತಾಲ್ಲೂಕು ಪಂಚಾಯಿತಿ ಅಧೀನದಲ್ಲಿರುವ ನಿವೇಶನದಲ್ಲಿ ನಿರ್ಮಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಎಸ್.ಜಿ.ಎಸ್.ವೈ/ಸಿಆರ್/ 46/2010-11 ದಿನಾಂಕ: 28-08-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2010-11ನೇ ಸಾಲಿನ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ವಿಶೇಷ ಯೋಜನೆಯಡಿಯಲ್ಲಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ಬಿ.ಎಂ. ರಸ್ತೆ ಪಕ್ಕದಲ್ಲಿರುವ ವಯಸ್ಕರ ಶಿಕ್ಷಣ ಇಲಾಖೆ ಇರುವ ಸ್ಥಳದಲ್ಲಿ ನಿರ್ಮಿಸಲು ದಿನಾಂಕ: 30-07-2010ರಂದು ನಡೆದ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಗಳು, ತಾಲ್ಲೂಕು ಪಂಚಾಯಿತಿ, ಹಾಸನ ತಾಲ್ಲೂಕು ಇವರು ತಾಲ್ಲೂಕು ಪಂಚಾಯಿತಿ ಅಧೀನದಲ್ಲಿರುವ ಬಿ.ಎಂ. ರಸ್ತೆ ಪಕ್ಕದ ಕೆ.ಎಸ್.ಆರ್.ಟಿ.ಸಿ ಉಪ ವಿಭಾಗಾಧಿಕಾರಿಗಳ (ಆಡುವಳ್ಳಿ) ಹಿಂಬಾಗದಲ್ಲಿ ಸುಮಾರು 1 ಎಕರೆ ನಿವೇಶನದಲ್ಲಿ (ಅಸ್ತಿ ಸಂ: 712 ) ಲಭ್ಯವಿರುವ ಸುಮಾರು 33000 ಅಡಿ ಖಾಲಿ ಜಾಗವಿರುವುದಾಗಿ, ಸದರಿ ಸ್ಥಳದಲ್ಲಿ ಸಾಮರ್ಥ್ಯ ಸೌಧ ಕಟ್ಟಡವನ್ನು ನಿರ್ಮಿಸಲು ಅನುಮತಿ ಕೇಳಿರುತ್ತಾರೆ. ಆದರೆ, ಈ ವಿಷಯಕ್ಕೆ ಕುರಿತಂತೆ ಸ್ಥಳ ತನಿಖೆ ನಡೆಸಿ ಪರಿಶೀಲಿಸಲಾಗಿ ಸದರಿ ಸ್ಥಳದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಾಮರ್ಥ್ಯ ಸೌಧ ಕಟ್ಟಡವನ್ನು ವಯಸ್ಕರ ಶಿಕ್ಷಣ ಇಲಾಖೆ ಇರುವ ಸ್ಥಳದಲ್ಲಿ ನಿರ್ಮಿಸಲು ಮತ್ತು ತಾಲ್ಲೂಕು ಪಂಚಾಯಿತಿ ಅಧೀನದಲ್ಲಿರುವ ಖಾಲಿ ನಿವೇಶನದಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸಲು ಅನುಕೂಲವಾಗಿರುತ್ತದೆ. ಆದುದರಿಂದ, ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸುವ ಸ್ಥಳದಲ್ಲಿ ಅಂದಾಜು ವೆಚ್ಚ ರೂ.25.00ಲಕ್ಷಗಳಿಗೆ ಸಾಮರ್ಥ್ಯ ಸೌಧ ಕಟ್ಟಡವನ್ನು ನಿರ್ಮಿಸಲು ಮತ್ತು ಸಾಮರ್ಥ್ಯ ಸೌಧ ನಿರ್ಮಿಸುವ ಸ್ಥಳದಲ್ಲಿ ಅಂದಾಜು ವೆಚ್ಚ ರೂ. 1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸುವ ಬಗ್ಗೆ ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿನ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ವಿಶೇಷ ಯೋಜನೆಯಡಿಯಲ್ಲಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ಹಾಸನ ತಾಲ್ಲೂಕು ಪಂಚಾಯಿತಿ ಅಧೀನದಲ್ಲಿರುವ ಬಿ.ಎಂ. ರಸ್ತೆ ಪಕ್ಕದ ಕೆ.ಎಸ್.ಆರ್.ಟಿಸಿ ಉಪ ವಿಭಾಗಾಧಿಕಾರಿಗಳ (ಆಡುವಳ್ಳಿ) ಹಿಂಬಾಗ ದಲ್ಲಿರುವ 33000 ಅಡಿ ಖಾಲಿ ಜಾಗದಲ್ಲಿ ನಿರ್ಮಿಸುವ ಬಗ್ಗೆ ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸ್ಥಳ ಪರಿಶೀಲನೆ ನಡೆಸಿ ನಂತರ ಮಾರಾಟ ಮಳಿಗೆಯನ್ನು ನಿರ್ಮಾಣ ಮಾಡುವ ಬಗ್ಗೆ ತೀರ್ಮಾನಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| 3 | 2007-08ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದಡಿ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕುಂದೂರು ಮಠ, ಚನ್ನರಾಯ ಪಟ್ಟಣ ತಾಲ್ಲೂಕು ಈ ಕಟ್ಟಡಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8) 82/2010-11 ದಿನಾಂಕ: 28-08-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿನಲ್ಲಿ ಮಂಜೂರಾಗಿ ಪ್ರಾರಂಭಿಸಲಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕುಂದೂರು ಮಠ, ಚನ್ನರಾಯಪಟ್ಟಣ ತಾಲ್ಲೂಕು ಇದಕ್ಕೆ ನೆಲ ಮಹಡಿ 6429 ಚ.ಅಡಿ ಮೊದಲನೆ ಮಹಡಿ 3717 ಚ.ಅಡಿ ಮತ್ತು ಮೈದಾನಕ್ಕಾಗಿ 74 ಗುಂಟೆ ವಿಸ್ತೀರ್ಣವಿರುವ ಶ್ರೀ ಡಿ.ಹೆಚ್. ಹನುಮೇಗೌಡ ಬಿನ್ ಶಂಭುಲಿಂಗೇಗೌಡ, ದೊಡ್ಡಕರಡೆ ಗ್ರಾಮ, ಕುಂದೂರು ಅಂಚೆ, ಚನ್ನರಾಯಪಟ್ಟಣ ತಾಲ್ಲೂಕು ಇವರ ಒಡೆತನದಲ್ಲಿರುವ ಕಟ್ಟಡವನ್ನು ಸರ್ಕಾರ ನಿಗದಿ ಪಡಿಸುವ ಬಾಡಿಗೆಯನ್ನು ನೀಡುವ ನಿಬಂಧನೆ ಮೇರೆಗೆ ಕಟ್ಟಡದ ಮಾಲೀಕರಿಂದ ಕರಾರು ಪತ್ರ ಪಡೆದು ದಿನಾಂಕ: 04-10-2007ರಿಂದ ಇಲಾಖೆಯ ವಶಕ್ಕೆ ಪಡೆದು, ಶಾಲೆಯನ್ನು ನಡೆಸಲಾಗುತ್ತಿದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಇವರು 2007-08ನೇ ಸಾಲಿಗೆ ರೂ.28500.00 2008-09ನೇ ಸಾಲಿಗೆ ರೂ.30500.00 ಮತ್ತು 2009-10ನೇ ಸಾಲಿಗೆ ರೂ.32000.00ಗಳ ಮಾಹೆಯಾನ ಬಾಡಿಗೆ ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ ಅದರಂತೆ, ಸದರಿ ಕಟ್ಟಡದ ಮಾಲೀಕರಿಗೆ ದಿನಾಂಕ: 04-10-2007ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಕೋರಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಕೋರಿರುವಂತೆ ಶ್ರೀ ಡಿ.ಹೆಚ್. ಹನುಮೇಗೌಡ ಬಿನ್ ಶಂಭುಲಿಂಗೇಗೌಡ, ದೊಡ್ಡಕರಡೆ ಗ್ರಾಮ, ಕುಂದೂರು ಅಂಚೆ, ಚನ್ನರಾಯಪಟ್ಟಣ ತಾಲ್ಲೂಕು ಇವರ ಒಡೆತನದಲ್ಲಿರುವ ಕಟ್ಟಡದಲ್ಲಿ ನಡೆಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ದಿನಾಂಕ: 04-10-2007ರಿಂದ ಅನ್ವಯ ವಾಗುವಂತೆ 2007-08ನೇ ಸಾಲಿಗೆ ಮಾಹೆಯಾನ ರೂ.28500/-(ರೂಪಾಯಿ ಇಪ್ಪತ್ತೆಂಟು ಸಾವಿರದ ಐದು ಸಾವಿರ ಮಾತ್ರ) 2008-09ನೇ ಸಾಲಿಗೆ ರೂ.30500/-(ರೂಪಾಯಿ ಮೂವತ್ತು ಸಾವಿರದ ಐದುನೂರು ಮಾತ್ರ) ಮತ್ತು 2009-10ನೇ ಸಾಲಿಗೆ ರೂ.32000/-(ಮೂವತ್ತೆರಡು ಸಾವಿರ ಮಾತ್ರ) ರಂತೆ ಮಾಹೆಯಾನ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | | | |
|---|---|---|---|
| 1 | 2010ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಸಂಪರ್ಕ ಯೋಜನೆ ಲೆಕ್ಕಶೀರ್ಷಿಕೆ 5054-04-337-7-01-132 ರಡಿ ರಸ್ತೆ ಮತ್ತು ಸೇತುವೆಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ. | ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, 2010-11ನೇ ಸಾಲಿಗೆ ಗ್ರಾಮೀಣ ಸಂಪರ್ಕ ಯೋಜನೆ ಲೆಕ್ಕಶೀರ್ಷಿಕೆ 5054-04-337-7-01-132 ರಡಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಹಾಸನ ಜಿಲ್ಲಾ ಪಂಚಾಯಿತಿಗೆ ರೂ.58.42ಲಕ್ಷಗಳನ್ನು ನಿಗದಿಪಡಿಸಿದ್ದು, ಮೊದಲನೇ ಕಂತಾಗಿ ರೂ.19.47ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದ್ದರಿಂದ, ಹಾಸನ ಜಿಲ್ಲಾ ಪಂಚಾಯಿತಿಗೆ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಬೇಕೆಂದು ಕೋರಿದರು.<br>ಮಾನ್ಯ ಸಮಿತಿ ಸದಸ್ಯರುಗಳು ಲೆಕ್ಕಶೀರ್ಷಿಕೆ 5054-04-337-7-01-132 ರಡಿ ರಸ್ತೆ ಮತ್ತು ಸೇತುವೆಗಳ ಯೋಜನೆಯಡಿ ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಕರೆದು ಅನುಷ್ಠಾನ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ ಗ್ರಾಮೀಣ ಸಂಪರ್ಕ ಯೋಜನೆ ಲೆಕ್ಕಶೀರ್ಷಿಕೆ 5054-04-337-7-01-132 ರಡಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಹಾಸನ ಜಿಲ್ಲಾ ಪಂಚಾಯಿತಿಗೆ ನಿಗದಿಪಡಿಸಿರುವ ರೂ.58.42ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಮತ್ತು ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಕರೆದು ಅನುಷ್ಠಾನ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2 | 2010-11ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702 ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಪುನರ್ ಸ್ಥಿತಿ ಮತ್ತು ಪುನಶ್ಚೇತನ ಯೋಜನೆಯಡಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ. | ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, 2010-11ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702ರ ಜಿಲ್ಲಾ ಪಂಚಾಯಿತಿಯ ಸಣ್ಣ ನೀರಾವರಿ ಕೆರೆಗಳ ಪುನರ್ ಸ್ಥಿತಿ ಹಾಗೂ ಪುನಶ್ಚೇತನ- ವಿಶೇಷ ಅಭಿವೃದ್ಧಿ ಲೆಕ್ಕಶೀರ್ಷಿಕೆ 4702-00-101-9-04-133(ಯೋ) ವಿಶೇಷ ಘಟಕ ಯೋಜನೆ ಲೆಕ್ಕಶೀರ್ಷಿಕೆ 4702-00-101-9-04-422(ಯೋ) ಹಾಗೂ ಗಿರಿಜನ ಉಪಯೋಜನೆ ಲೆಕ್ಕಶೀರ್ಷಿಕೆ 4702-00-101-9-04-423 ( ಯೋ) ರಡಿ ಹಾಸನ ಜಿಲ್ಲೆಗೆ ಒಟ್ಟು ರೂ.79.78ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿರುತ್ತದೆ. ಈ ಆದೇಶದಂತೆ ಹಂಚಿಕೆಯಾದ ಅನುದಾನದಲ್ಲಿ 2008-09ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಪಂಚಾಯಿತಿಯ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡು ಅನುಷ್ಠಾನಗೊಳಿಸಿದ ತಾಲ್ಲೂಕುವಾರು ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಿ ಮುಂದುವರದ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಿ ಹೊಸ ಕಾಮಗಾರಿಗಳಿಗೆ ಅನುದಾನ ಲಭ್ಯವಿದ್ದಲ್ಲಿ ಅಂತಹ ಕಾಮಗಾರಿಗಳನ್ನು ಪೂರ್ಣಗೊಳಿಸಿ, ನಂತರ ಅನುದಾನ ಲಭ್ಯವಾದಲ್ಲಿ, ಉಳಿತಾಯವಾಗುವ ಅನುದಾಕ್ಕೆ ಅನುಗುಣವಾಗಿ ಜಿಲ್ಲಾ ಪಂಚಾಯಿತಿಯ ಮಟ್ಟದಲ್ಲಿಯೇ ಸರ್ಕಾರದ ಸುತ್ತೋಲೆ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702ರ ಜಿಲ್ಲಾ ಪಂಚಾಯಿತಿಯ ಸಣ್ಣ ನೀರಾವರಿ ಕೆರೆಗಳ ಪುನರ್ ಸ್ಥಿತಿ ಹಾಗೂ ಪುನಶ್ಚೇತನ- ವಿಶೇಷ ಅಭಿವೃದ್ಧಿ ಲೆಕ್ಕಶೀರ್ಷಿಕೆ 4702-00-101-9-04-133(ಯೋ) ವಿಶೇಷ ಘಟಕ ಯೋಜನೆ ಲೆಕ್ಕಶೀರ್ಷಿಕೆ 4702-00-101-9-04-422(ಯೋ) ಹಾಗೂ ಗಿರಿಜನ |

| | | | |
|---|---|---|---|
| | | ಸಂಖ್ಯೆ: ಗ್ರಾಅಪ 2 ಕೆರೆ 2008 ದಿ: 29-12-2008ರಲ್ಲಿನ ಷರತ್ತು ಮತ್ತು ನಿಬಂಧನೆಗಳನ್ವಯ ಪ್ರತ್ಯೇಕ ಕ್ರಿಯಾ ಯೋಜನೆ ತಯಾರಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿ ಆ ನಂತರ ಸರ್ಕಾರದ ಅನುಮೋದನೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸರ್ಕಾರದ ಅನುಮೋದನೆ ಪಡೆಯದೆ ಯಾವುದೇ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದಲ್ಲ. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು ಈ ಕಾರ್ಯಕ್ರಮದ ಯೋಜನಾ ಅನುಷ್ಠಾನ ಘಟಕಗಳಾಗಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳು ಸದರಿ ಯೋಜನೆಗೆ ಅಧಿಸೂಚಿತ ಜವಾಬ್ದಾರಿಯುತ ಅಧಿಕಾರಿಗಳಾಗಿರುತ್ತಾರೆಂದು ಆದೇಶದಲ್ಲಿ ತಿಳಿಸಿರುತ್ತಾರೆಂದು ಸಭೆಗೆ ವಿವರ ನೀಡಿದರು.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, 2008-09ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸಿರುವ ಕಾಮಗಾರಿಗಳ ಪಟ್ಟಿಯನ್ನು ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ನೀಡಲು ಕ್ರಮವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ ಇವರಿಗೆ ತಿಳಿಸಿದರು. | ಉಪಯೋಜನೆ ಲೆಕ್ಕಶೀರ್ಷಿಕೆ 4702-00-101-9-04-423 (ಯೋ)ರಡಿ ಹಾಸನ ಜಿಲ್ಲೆಗೆ ಹಂಚಿಕೆ ಮಾಡಿರುವ ಒಟ್ಟು ರೂ.79.78ಲಕ್ಷಗಳ ಅನುದಾನದಲ್ಲಿ ಸರ್ಕಾರದ ಆದೇಶದಲ್ಲಿ ತಿಳಿಸಿರುವ ನಿರ್ದೇಶನಗಳನ್ವಯ ಕ್ರಮ ವಹಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 3 | 13ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2010-11ನೇ ಸಾಲಿನ ಮೊದಲನೇ ಕಂತಿನ ಅನುದಾನಕ್ಕೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು. | ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಈಗಾಗಲೇ 13ನೇ ಹಣಕಾಸು ಆಯೋಗದಡಿ ಹಾಸನ ಜಿಲ್ಲಾ ಪಂಚಾಯಿತಿಗೆ ರೂ.85.43ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನದಲ್ಲಿ 12ನೇ ಹಣಕಾಸು ಯೋಜನೆಯಮಾರ್ಗದರ್ಶಿಯನ್ವಯ ಸಿದ್ಧಪಡಿಸಿ ಅದನ್ನು ಜಿಲ್ಲಾ ಪಂಚಾಯಿತಿಗಳ ಸ್ಥಾಯಿ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಿಯಮಾನುಸಾರ ಅನುಷ್ಠಾನಗೊಳಿಸುವಂತೆ ಹಾಗೂ ಕೈಗೊಳ್ಳುವ ಕಾಮಗಾರಿಗೆ ಈಗ ಒದಗಿಸಿರುವ ಅನುದಾನದಲ್ಲಿಯೇ ಪೂರ್ಣಗೊಳ್ಳುವಂತಿರಬೇಕೆಂದು ತಿಳಿಸಿದ್ದು, ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಬೇಕೆಂದು ವಿಷಯವನ್ನು ಸಭೆಗೆ ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ 13ನೇ ಹಣಕಾಸು ಆಯೋಗದಡಿ ಹಾಸನ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾಗಿರುವ ರೂ.85.43ಲಕ್ಷಗಳ ಅನುದಾನದ ಕ್ರಿಯಾ ಯೋಜನೆಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| | | ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ವಿಶ್ವ ಯೋಜನೆಯಡಿಯಲ್ಲಿ ಶೆಡ್ ಗಳನ್ನು ನಿರ್ಮಿಸಲಾಗಿದ್ದು, ಅವುಗಳಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸದೇ ಇರುವುದರಿಂದ, ಶೆಡ್ ಗಳು ಖಾಲಿ ಉಳಿದಿರುತ್ತವೆ. ಆದ್ದರಿಂದ, ಅವುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿರುವ ಅಂಗನವಾಡಿ ಕೇಂದ್ರಗಳಿಗಾಗಲೀ ಅಥವಾ ಸ್ತ್ರೀ ಶಕ್ತಿ ಸಂಘಗಳಿಗಾಗಲೀ ನೀಡಿದಲ್ಲಿ ಉಪಯೋಗಕ್ಕೆ ಬರುತ್ತವೆ.<br>ಆದ್ದರಿಂದ, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ವಿಶ್ವ ಯೋಜನೆಯಡಿ ನಿರ್ಮಿಸಿರುವ ಶೆಡ್ ಗಳ ಬಗ್ಗೆ ಪರಿಶೀಲನೆ ನಡೆಸಿ ಗ್ರಾಮೀಣ ಪ್ರದೇಶಗಳಲ್ಲಿರುವ ಅಂಗನವಾಡಿ ಕೇಂದ್ರಗಳಿಗಾಗಲೀ ಅಥವಾ ಸ್ತ್ರೀ ಶಕ್ತಿ ಸಂಘಗಳಿಗಾಗಲೀ ನೀಡಲು ಕ್ರಮ ವಹಿಸಬೇಕೆಂದು ತಿಳಿಸಿದರು.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಐಎಂಐಎಸ್ ಅಡಿಯಲ್ಲಿ ಮಂಜೂರಾಗಿರುವ ಸಬ್ ಮಿಷನ್ ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನ ಮಾಡಿದ ನಂತರ ಯಾರು ನಿರ್ವಹಣೆ ಮಾಡಬೇಕು ಎನ್ನುವ ಬಗ್ಗೆ ಸೂಕ್ತ ನಿರ್ದೇಶನ ಇರುವುದಿಲ್ಲ. ಇದರಿಂದ, ಮುಂದೆ ಯೋಜನೆಗಳ ನಿರ್ವಹಣೆಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ಈ ಬಗ್ಗೆ ಪರಿಶೀಲಿನೆ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು. | |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಎಸ್.ದ್ಯಾವೇಗೌಡ)
ಅಧ್ಯಕ್ಷರು
ಸಾಮಾನ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.